# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/113/2015-16 ದಿನಾಂಕ:22.09.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಶ್ರೀ ಎಂ.ಮಲ್ಲಪ್ಪ ತಂದೆ ಹೆಗ್ಗಪ್ಪ<br>ಗ್ರಾಮ:-ಕೋಗಳಿ ತಾ:-ಹೆಚ್.ಬಿ.ಹಳ್ಳಿ | ಶ್ರೀಮತಿ ರಿಂದಮ್ಮ ಗಂಡ ಸಂಜೀವಪ್ಪ<br>ಗ್ರಾಮ:-ಹಿಟ್ನಾಳ್ ತಾ:-ಕೊಪ್ಪಳ ಜಿಲ್ಲಾ:-ಕೊಪ್ಪಳ<br>[ಶ್ರೀ ಶ್ರೀನಿವಾಸ ಎಸ್, ವಕೀಲರು, ಹ.ಬೊ.ಹಳ್ಳಿ] |

ವಿವಾದಿತ ಜಮೀನಿನ ವಿವರ:

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಅಲಬೂರು | 217/ಬಿ | 4-23 | ಖುಷ್ಕಿ |

ಪೀಠಿಕೆ:-

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಅಲಬೂರು ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಗಳಿ ಗ್ರಾಮದ ನಿವಾಸಿಯಾದ ಎಂ.ಮಲ್ಲಪ್ಪ ತಂದೆ ಹೆಗ್ಗಪ್ಪ ಇವರು ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಗಳಿ ಗ್ರಾಮದ ಎಸ್.ಸಂಗನಬಸಪ್ಪ ತಂದೆ ಲಕ್ಷ್ಮಪ್ಪ ಇವರಿಂದ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ 751/96-97 ದಿನಾಂಕ:25.02.1997 ರಂದು ಮೊತ್ತ ರೂ:51,000/-ಕ್ಕೆ ಖರೀದಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21ರ ನೋಟೀಸನ್ನು ದಿನಾಂಕ:09.03.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ರಿಂದಮ್ಮ ಗಂಡ ಸಂಜೀವಪ್ಪ ಇವರು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.95/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:19.05.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:19.05.2016 ರಿಂದ 08.09.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯರು ಹಾಜರಾಗಿರುತ್ತಾರೆ. ಪ್ರಕರಣದಲ್ಲಿ ದಿನಾಂಕ:09.06.2016 ರಂದು ಉಭಯರು ಹಾಜರಾಗಿರುತ್ತಾರೆ. ತಕರಾರುದಾರರ ಪರ ಶ್ರೀನಿವಾಸ ಎಸ್, ವಕೀಲರು, ಹ.ಬೊ.ಹಳ್ಳಿ ಇವರು ತಮ್ಮ ವಕಾಲತ್ತು ಅರ್ಜಿಯನ್ನು ಸಲ್ಲಿಸಿ ಹೇಳುವಂತೆ; ಈಗಾಗಲೇ ಸದರಿ ಜಮೀನು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿರವುದರಿಂದ ಆದೇಶವನ್ನು ಕಾಯ್ದಿರಿಸಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಅರ್ಜಿದಾರರು ಹೇಳುವಂತೆ; ಸದರಿ ಜಮೀನಿನಲ್ಲಿ ಸುಮಾರು 30 ವರ್ಷದಿಂದ ಸಾಗು ಇರುವುದರಿಂದ ಸದರಿ ಜಮೀನು ನಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡುವಂತೆ ಕೋರಿರುತ್ತಾರೆ.

ಮುಂದುವರೆದು ಪ್ರಕರಣದಲ್ಲಿ ದಿನಾಂಕ:27.07.2016 ರಂದು ತಕರಾರುದಾರರ ಪರ ವಕೀಲರು ಹಾಜರಾಗಿ ಎದರುದಾರರ ಪರ ಸಲ್ಲಿಸಲಾದ ತಕರಾರು ಅರ್ಜಿಯನ್ನು ಲಿಖಿತವಾಗಿ ಈ ಕೆಳಗಿನಂತೆ ಸಲ್ಲಿಸಿರುತ್ತಾರೆ.

ಪುಟ-2ಕ್ಕೆ

1) ಅರ್ಜಿದಾರರು ಸಲ್ಲಿಸಿದ ಅರ್ಜಿ ಕಾನೂನಿನಿಂದ ಅಮಾನ್ಯವಾದುದ್ದಾಗಿದೆ. ಎದರುದಾರರಿಗೆ ಸಂಬಂಧಿಸಿದ ಮತ್ತು ಅವರ ಸ್ವಾಧೀನತೆಯಲ್ಲಿರುವ ಆಸ್ತಿಯನ್ನು ಕಬಳಿಸುವ ಉದ್ದೇಶಹೊಂದಿ ಒಂದು ಸೃಷ್ಟಿತ ದಾಖಲಾತಿ ಅನುಸಾರ ಸಲ್ಲಿಸಿದ್ದಾಗಿರುತ್ತದೆ.

2) ಅರ್ಜಿದಾರರಿಗೆ ಎದರುದಾರರ ತಂದೆ ದಿವಾಂಗತ ಸಂಗನಬಸಪ್ಪ ರವರು 25.02.1997 ರಲ್ಲಿ 51,000/-ರೂಗಳಿಗೆ ವಿವಾದಿತ ಜಮೀನು 2-23 ಎಕರೆಯನ್ನು ಜಮೀನಿಗಾಗಿ ಅರ್ಜಿದಾರರಿಗೆ ಬರೆದುಕೊಟ್ಟಿದ್ದು ಇರುತ್ತದೆ. ತದನಂತರ ಎದರುದಾರಳ ತಂದೆಯ ಜೀವಿತಾವಧಿಯಲ್ಲಿ ಸದರಿ ಮೇಲ್ಕಂಡ ಅರ್ಜಿದಾರರಿಂದ ಪಡೆದ ಮೊತ್ತ 51,000/-ರೂಗಳನ್ನು ಬಡ್ಡಿ ಸಮೇತ ಎದರುದಾರಳ ತಂದೆ ತೀರಿಸಿರುತ್ತಾರೆ. ಆದರೆ ಆತನ ಜೀವಿತಾಅವಧಿಯಲ್ಲಿ ಅರ್ಜಿದಾರನ ಮೇಲೆ ಇದ್ದ ನಂಬಿಕೆ ವಿಶ್ವಾಸದಿಂದಾಗಿ ಮರುತಿರುವಳಿ ಪತ್ರ ಮಾಡಿಸಿಕೊಂಡಿರುವುದಿಲ್ಲ. ಹಾಗೂ ಎದರುದಾರಳ ತಂದೆಯ ಜೀವಿತಾವಧಿಯಲ್ಲಿಯೇ ಎದರುದಾರಳ ತಂದೆ ತಾನು ಸಾಲ ತೀರಿಸಿದ್ದಕ್ಕಾಗಿ ತನ್ನ ಜಮೀನಿನ ಮರು ಕ್ರಯ ಪತ್ರವನ್ನು ಮಾಡಿಕೊಡು ಎಂದು ಸಾಕಷ್ಟು ಬಾರಿ ಬೇಡಿಕೊಂಡರು ಅರ್ಜಿದಾರನ್ನು ಒಂದಿಲ್ಲೊಂದು ಕಾರಣ ಹೇಳುತ್ತಾ ಮುಂದೂಡುತ್ತಾ ಬಂದಿರುತ್ತಾನೆ. ಅರ್ಜಿದಾರನು ಸದರಿ ವಿವಾದಾಸ್ಪದ ಜಮೀನನ್ನು ಖರೀದಿಸಿರುವುದಷ್ಟೆಯಾಗಿದ್ದು, ಆದರೆ ಎಂದಿಗೂ ಸಹಾ ಆತನು ಈ ಖರೀದಿ ಪತ್ರದ ಆಧಾರದ ಮೇಲೆ ಸ್ವಾಧೀನತೆಯನ್ನು ಹೊಂದಿರುವುದಿಲ್ಲ. ಎದುರುದಾರಳ ತಂದೆ ಸಂಗನಬಸಪ್ಪನ ಜೀವಿತಾವಧಿಯಲ್ಲಿ ಆತನು ಆತನ ಮರಣ ನಂತರ ಎದುರುದಾರಳು ಸ್ವಾಧೀನತೆಯನ್ನು ಹೊಂದಿಯಾವುದೆ ಮೂರನೇ ವ್ಯಕ್ತಗಳ ತಂಟೆ ತಕರಾರು ಇಲ್ಲದೇ ಶಾಂತಿಯುತವಾಗಿ ವಿವಾದಾಸ್ಪದ ಜಮೀನನ್ನು ಅನುಭೋಗಿಸುತ್ತಾ ಬಂದಿರುತ್ತಾಳೆ. ಅದ್ದರಿಂದ ಎದುರುದಾರಳು ಹಾಗೂ ಆಕೆಯ ತಂದೆ ಜೀವಿತಾವಧಿಯಲ್ಲಿ ಆತನು ವಿವಾದಾಸ್ಪದ ಜಮೀನಿನ ಪ್ರತಿಕೂಲ ಸ್ವಾಧೀನದಾರರಾಗಿದ್ದು ಸದರಿ ಪ್ರತಿಕೂಲ ಸ್ವಾಧೀನತೆಯ ಕಾನೂನಿನ ಅನ್ವಯ ಎದುರುದಾರಳು ಈಗಾಗಲೇ ತನ್ನನ್ನೆ ವಿವಾದಾಸ್ಪದ ಜಮೀನಿನ ಮಾಲಿಕಳೆಂದು ಹುಕುಂನಾಮೆ ಹೊಡರಿಸಬೇಕು ಹಾಗೂ ಅರ್ಜಿದಾರನ ಹಾಗೂ ಆತನ ಸಂಬಂಧಗಳ ಬಂಧುಬಳಗದ ಆತನ ಕೂಲಿ ಕಾರ್ಮಿಕರ ಹಾಗೂ ಇನ್ನಿತರೆಯವರ ವಿರುದ್ಧ ಶಾಶ್ವತ ನಿರ್ಭಂಧ ಕಟ್ಟಾಜ್ಞೆ ಕೋರಿ ಹ.ಬೊ.ಹಳ್ಳಿ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಒಂದು ಅಸಲು ದಾವೆ ಸಲ್ಲಿಸಿರುತ್ತಾಳೆ. ಸದರಿ ಅಸಲು ದಾವೆಯ ಸಂಖ್ಯೆ 175/2016 ಇದ್ದು, ಸದರಿ ಅಸಲು ದಾವೆಯು ಆರ್ಡರ್ ಸೀಟ್‌ನ ಅಧಿಕೃತ ನಕಲು ಹಾಗೂ ವಾದ ಪತ್ರದ ದೃಢೀಕೃತ ನಕಲುಗಳನ್ನು ಈ ಘನ ನ್ಯಾಯಾಲಯದ ಅವಗಾಹನೆಗಾಗಿ ಸಲ್ಲಿಸಲಾಗಿದೆ. ವಿವಾದಾಸ್ಪದ ಜಮೀನು ಇನಾಮ್ ಭೂಮಿಯಾಗಿದ್ದು, ಸದರಿ ಇನಾಮ್ ಸಹಾ ಸದರಿ ಎದುರುದಾರಳ ಪರ ರದ್ದಾಗಿದೆ.

3) ಅರ್ಜಿದಾರನೆ ಎಂದಿಗೂ ಸಹಾ ಈ ಮೇಲ್ಕಂಡ ವಿವಾದಾಸ್ಪದ ಜಮೀನಿನ ಸ್ವಾಧೀನತೆಯನ್ನು ಹೊಂದಲ್ಲದೆ ಇರುವುದರಿಂದ ಹಾಗೂ ಈಗಾಗಲೇ ತಾನು ಕೊಟ್ಟಂತಹ 51,000/-ರೂ ಹಣ ಹಾಗೂ ಅದಕ್ಕೆ ತಗಲುವ ಬಡ್ಡಿ ಮೊತ್ತವನ್ನು ಈಗಾಗಲೇ ಸ್ವೀಕರಿಸಿರುವುದರಿಂದ ಅರ್ಜಿದಾರನು ಈಗ ವಿವಾದಾಸ್ಪದ ಖರೀದಿ ಪತ್ರದ ಆಧಾರದ ಮೇಲೆ ಖಾತೆ ಬದಲಾವಣೆಗೆ ಸಲ್ಲಿಸಿರುವ ಅರ್ಜಿಯು ಕಾನೂನುನಿಂದ ಅಮಾನ್ಯವಾದದ್ದಾಗಿರುತ್ತದೆ. ಸದರಿ ವಿವಾದಾಸ್ಪದ ಖರೀಧಿ ಪತ್ರದ ಆಧಾರದ ಮೇಲೆ ನ್ಯಾಯಾಲಯವು ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸದಲ್ಲಿ ಎದರುದಾರಳಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ.

ಪುಟ-3ಕ್ಕೆ

4) ಅರ್ಜಿದಾರನು ಎದುರುದಾರಳ ಮಹಿಳೆಯಾಗಿದ್ದು ವೃದ್ದಾಪ್ಯ ಹಂತದಲ್ಲಿರುವ ಅಬಲೆಯಾದ ಆಕೆಯನ್ನು ಮೋಸಮಾಡುವ ಹಾಗೂ ಮೌಲ್ಯಯುತವಾದ ಆಕೆಯ ಸ್ವಾಧೀನದಲ್ಲಿರುವ ವಿವಾದಾಸ್ಪದ ಜಮೀನನ್ನು ಕಬಳಿಸುವ ಹುನ್ನಾರವನ್ನು ಹೊಂದಿದ್ದು, ಈ ಖಾತಬದಲಾವಣೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿದಾರನು ಎದರುದಾರರ ತಂದೆ ಶ್ರೀ ದಿವಾಂಗತ ಸಂಗನಬಸಪ್ಪ ಇವರ ಜೀವಿತಾವದಿಯಲ್ಲಿ ಎಂದಿಗೂ ಸಹಾ ಖಾತ ಬದಲಾವಣೆಗೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆತನ ಮರಣ ನಂತರ ಅಸಲು ವಿಷಯಗಳನ್ನು ಘನ ನ್ಯಾಯಾಲಯದ ಮುಂದೆ ಮರೆಮಾಚಿ ದೂರುದಾರರಿಗೆ ಹಾಗೂ ಆಕೆಯ ಕಾನೂನು ಬದ್ಧ ವಾರಸುದಾರರಿಗೆ ಮೋಸಮಾಡುವ ಹುನ್ನಾರವನ್ನು ಹೊಂದಿ ಅರ್ಜಿ ಸಲ್ಲಿಸಿರುತ್ತಾರೆ.

5) ಈ ಮೇಲ್ಕಂಡ ಪ್ರತಿಕೂಲ ಸ್ವಾಧೀನತೆಯು ಕಾನೂನಿನ ಅನ್ವಯ ಪರಾಮರ್ಶ ಮಾಡುವ ಹಾಗೂ ಸದರಿ ದಾಖಲೆಗಳನ್ನು ಅನುಸರಿಸಿ ಸಾಕ್ಷಗಳನ್ನು ಪರಿಗಣಿಸಿ ಸೂಕ್ತ ಮಾಲೀಕರನ್ನು ಘೋಷಿಸುವ ಅಧಿಕಾರ ವ್ಯಾಪ್ತಿ ಈ ನ್ಯಾಯಾಲಯಕ್ಕೆ ಇರುವುದಿಲ್ಲ. ಹಾಗೂ ಅರ್ಜಿದಾರರು ಹಾಗೂ ಎದುರುದಾರಳ ನಡುವಿನ ವಿವಾದವು ಸಿವಿಲ್ ಸ್ವರೂಪದ್ದಾಗಿದ್ದು ಉಭಯ ಪಕ್ಷಕಾರರು ಸಿವಿಲ್ ನ್ಯಾಯಾಲಯದಲ್ಲಿ ನ್ಯಾಯ ಕಂಡುಕೊಳ್ಳುವಂತೆ ಈ ನ್ಯಾಯಾಲಯವು ಆದೇಶಕ್ಕಾಗಿ ಪ್ರಾರ್ಥನೆ.

6) ಇದಲ್ಲದೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು 1999 ರಲ್ಲಿ ಬಸಗೌಡ ವಿರುದ್ದ ಸಹಾಯಕ ಆಯುಕ್ತರು ಚಿಕ್ಕೋಡಿ ಈ ಪ್ರಕರಣದಲ್ಲಿ ಕರ್ನಾಟಕ ಲ್ಯಾಂಡ್ ರೆವಿನ್ಯೂ ಕಾಯ್ದೆ 1964 ರಲ್ಲಿ ಸೆಕ್ಷನ್ 128, 129 ರನ್ವಯ ಯಾವುದೇ ಸಿವೀಲ್ ಸ್ವರೂಪದ ವಿವಾದವಿದ್ದಲ್ಲಿ ಮೇಲ್ಕಂಡ ಕಲಂಗಳನ್ವಯ ಖಾತೆ ಬದಲಾವಣೆ ಮಾಡುವಂತಿಲ್ಲ ಎಂದು ಆದೇಶಿಸಿದೆ. ಅದೇ ರೀತಿ ಮತ್ತೊಂದು ನಿರ್ಣಿತ ಪ್ರಕರಣ 2006 ರಲ್ಲಿ ಬಸಪ್ಪ ವಿರುದ್ದ ಜಿಲ್ಲಾಧಿಕಾರಿಗಳು ಬಿಜಾಪುರ ಈ ಪ್ರಕರಣದಲ್ಲಿಯು ಎಂದು ಸಹಾ ನ್ಯಾಯಾಲಯದಲ್ಲಿ ಈಗಾಗಲೇ ಸಿವಿಲ್ ದಾವೆ ಇದ್ದಲ್ಲಿ ಯಾವುದೇ ಖಾತೆ ಬದಲಾವಣೆ ಮಾಡುವಂತಿಲ್ಲ ಎಂದು ಕರ್ನಾಟಕ ಉಚ್ಚ ನ್ಯಾಯಾಲಯ ಆದೇಶಿಸಿರುತ್ತದೆ. ಸದರಿ ಆದೇಶದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

7) ಅದ್ದರಿಂದ ಈ ಮೇಲ್ಕಂಡ ಕರ್ನಾಟಕ ಉಚ್ಚನ್ಯಾಯಾಲಯ ಎರಡು ಪ್ರಕರಣಗಳು ಈ ವಿವಾದಾಸ್ಪದ ಪ್ರಕರಣಕ್ಕೆ ಸೂಕ್ತ ನ್ಯಾಯದೊರಕಿಸುಕೊಡವಲ್ಲಿ ಸಹಾಯವಾಗಿದ್ದು, ಹಾಗೂ ಅವುಗಳನ್ನು ಅನುಸರಿಸಿ ಆದೇಶಿಸಿಸುವುದು ಈ ನ್ಯಾಯಾಲಯದ ಕರ್ತವ್ಯವಾಗಿದ್ದು ಅದರನ್ವಯ ಉಭಯ ಪಕ್ಷಕಾರರು ಸಿವಿಲ್ ನ್ಯಾಯಾಲಯದಲ್ಲಿ ನ್ಯಾಯಕಂಡುಕೊಳ್ಳಲು ಆದೇಶಿಸಬೇಕಾಗಿ ಪ್ರಾರ್ಥನೆ.

ಆದ್ದರಿಂದ ಈ ಮೇಲ್ಕಂಡ ಎಲ್ಲಾ ದಾಖಲಾತಿಗಳು, ಅಂಶಗಳು ಹಾಗೂ ಕರ್ನಾಟಕ ಉಚ್ಚನ್ಯಾಯಾಲಯದ ಪ್ರಕರಣಗಳನ್ನು ಪರಿಗಣಿಸಿ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಬೇಕೆಂದು ಹಾಗೂ ಉಭಯ ಪಕ್ಷಕಾರರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಬೇಕೆಂದು ಆದೇಶಿಸಬೇಕಾಗಿ ಸವಿನೆಯ ಪ್ರಾರ್ಥನೆಯನ್ನು ಲಿಖಿತವಾಗಿ ನೀಡಿರುತ್ತಾರೆ. ಹಾಗೂ ಮಾನ್ಯ ಜೆ.ಎಂ.ಎಫ್.ಸಿ. ಸಿವಿಲ್ ನ್ಯಾಯಾಲಯ ಹಗರಿಬೊಮ್ಮನಹಳ್ಳಿ ದಾವೆ ಸಂಖ್ಯೆ ಒ.ಎಸ್.ನಂ.175/2016 ರ ದೃಢೀಕೃತ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಪುಟ-4ಕ್ಕೆ